# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 108
2. ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
3. ಉತ್ತರಿಸುವ ದಿನಾಂಕ : 20-12-2022
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ವಿಸ್ತೀರ್ಣದಲ್ಲಿ ರಾಜ ಕಾಲುವೆಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜಕಾಲುವೆಗಳ ಒತ್ತುವರಿ ಕುರಿತಂತೆ 2015-16ನೇ ಸಾಲಿನಿಂದ ಇಲ್ಲಿಯವರೆವಿಗೂ ಸರ್ವೆ ಇಲಾಖೆಯಿಂದ ಒಟ್ಟು 2671 ಒತ್ತುವರಿಗಳನ್ನು ಗುರುತಿಸಲಾಗಿರುತ್ತದೆ. |
| ಆ | ಒತ್ತುವರಿಯಾದ ರಾಜ ಕಾಲುವೆಗಳ ಪೈಕಿ ಎಷ್ಟು ವಿಸ್ತೀರ್ಣವನ್ನು ತೆರವುಗೊಳಿಸಲಾಗಿದೆ; | 2015-16ನೇ ಸಾಲಿನಿಂದ 2022-23ನೇ ಸಾಲಿನವರೆವಿಗೂ ಒಟ್ಟು 2073 ಸಂಖ್ಯೆಯ ಒತ್ತುವರಿಗಳನ್ನು ತೆರುವುಗೊಳಿಸಲಾಗಿರುತ್ತದೆ. |
| ಇ | ಬಾಕಿಯಿರುವ ರಾಜ ಕಾಲುವೆ ಒತ್ತುವರಿ ತೆರವು ಕಾರ್ಯವನ್ನು ಯಾವ ಕಾಲಮಿತಿಯೊಳಗೆ ಕೈಗೊಳ್ಳಲಾಗುವುದು (ವಿವರವಾದ ಮಾಹಿತಿ ನೀಡುವುದು) | ಬಿಬಿಎಂಪಿ ವ್ಯಾಪ್ತಿಯಲ್ಲಿನ ಬೃಹತ್ ಮಳೆ ನೀರುಗಾಲುವೆಗೆ ಸಂಬಂಧಿಸಿದಂತೆ ಪ್ರಸ್ತುತ ಬಾಕಿ ಇರುವಂತಹ ರಾಜಕಾಲುವೆಯ ಒತ್ತುವರಿಗಳನ್ನು ತೆರವುಗೊಳಿಸಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರ ಕಛೇರಿಯಿಂದ ಮೋಜಿಣಿದಾರರನ್ನು ನೇಮಿಸಿದ್ದು, ಸದರಿ ಒತ್ತುವರಿಗಳನ್ನು ಗುರುತಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.<br>ಈ ಒತ್ತುವರಿಗಳ ಕುರಿತಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸುಮಾರು 67 ಪ್ರಕರಣಗಳು ಬಾಕಿ ಇರುತ್ತವೆ. |

**ಸಂಖ್ಯೆ: ನಅಇ 921 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ